International Journal of Kannada Research 2020; 6(4): 103-106

International Journal of Kannada Research
www.kannadajournal.com

ISSN: 2454–5813
IJKR 2020; 6(4): 103-106
© 2020 IJKR
www.kannadajournal.com
Received: 17-08-2020
Accepted: 20-09-2020

ಡಾ. ಎಂ. ರಂಗಸ್ವಾಮಿ
ಸಹಾಯಕ ಪ್ರಾಧ್ಯಾಪಕರು, ಕನ್ನಡ ವಿಭಾಗ, ಮದ್ರಾಸ್ ವಿಶ್ವವಿದ್ಯಾಲಯ, ಮರೀನಾ ಕ್ಯಾಂಪಸ್, ಚೆನ್ನೈ, ತಮಿಳುನಾಡು, ಭಾರತ

Corresponding Author:
ಡಾ. ಎಂ. ರಂಗಸ್ವಾಮಿ
ಸಹಾಯಕ ಪ್ರಾಧ್ಯಾಪಕರು, ಕನ್ನಡ ವಿಭಾಗ, ಮದ್ರಾಸ್ ವಿಶ್ವವಿದ್ಯಾಲಯ, ಮರೀನಾ ಕ್ಯಾಂಪಸ್, ಚೆನ್ನೈ, ತಮಿಳುನಾಡು, ಭಾರತ

# ಕುವೆಂಪು ಅವರ ಕನ್ನಡಪರ ಚಿಂತನೆಗಳು

**ಡಾ. ಎಂ. ರಂಗಸ್ವಾಮಿ**

ಕನ್ನಡ ಹಾಗೂ ಕರ್ನಾಟಕದ ಕೀರ್ತಿ, ಮಹಿಮೆಗಳನ್ನು ಉನ್ನತ ಮಟ್ಟಕ್ಕೇರಿಸಿದವರಲ್ಲಿ ಕುವೆಂಪುರವರು ಪ್ರಮುಖರಾಗಿದ್ದಾರೆ. ಕನ್ನಡ, ಕರ್ನಾಟಕ ಕುವೆಂಪು ಅವರ ಸಾಹಿತ್ಯದ ಪ್ರಮುಖ ವಸ್ತುಗಳಾಗಿವೆ, ಶಕ್ತಿಗಳಾಗಿವೆ. ಇವರ ಸಾಹಿತ್ಯದಲ್ಲಿ ಕನ್ನಡ ನಾಡು ಮತ್ತು ನುಡಿ ಆರಾಧ್ಯ ವಸ್ತುಗಳಾದವು. ತಮ್ಮ ಭಾಷಣ ಮತ್ತು ಸಂಭಾಷಣೆಗಳ ಮೂಲಕ ಕನ್ನಡದ ಅಪಾರ ಶಕ್ತಿ ಸಾಮರ್ಥ್ಯವನ್ನು ಘಂಟಾಘೋಷವಾಗಿ ನಾಡಿನ ಜನತೆಗೆ ಸಾರಿ ಹೇಳಿದವರು ಕುವೆಂಪು. ಕುವೆಂಪು ಅವರಿಗೆ ' ಕನ್ನಡ ಶಬ್ದೋಚಾರಣ ಮಾತ್ರದಿಂದಲೇ ಅವರ ಎದೆ ಕುಣಿದಾಡುತ್ತದೆ, ಕಿವಿ ನಿಮಿರುತ್ತದೆ, ಕಾಮನ ಬಿಲ್ಲನ್ನು ಕಾಣುವ ಕವಿಯಂತೆ ಮನ ಮೈಮರೆಯುತ್ತದೆ.' ತಾಯ್ನುಡಿಗೆ ದುಡಿದಾಗಲೇ ಎಲ್ಲವೂ ಸಾರ್ಥಕ ಎಂಬುದು ಅವರ ಅಚಲವಾದ ನಂಬಿಕೆಯಾಗಿತ್ತು.

ಕುವೆಂಪು ಅವರು ಅಧ್ಯಾಪಕರಾಗಿ, ಪ್ರಾಧ್ಯಪಕರಾಗಿ, ವಿಶ್ವವಿದ್ಯಾಲಯದ ಅತ್ಯುನ್ನತ ಅಧಿಕಾರಿಯಾಗಿ, ವಿದ್ಯಾತಜ್ಞರಾಗಿ ವಿದ್ಯಾರ್ಥಿ ವೃಂದದ ಮಾನಸಿಕ, ಬೌದ್ಧಿಕ ಶಕ್ತಿ ಸಾಮರ್ಥ್ಯವನ್ನು ಅರಿತುಕೊಂಡು ಪ್ರಾದೇಶಿಕ ಭಾಷೆಯೇ ಶಿಕ್ಷಣ ಮಾಧ್ಯಮವಾಗಬೇಕೆಂದು ಘೋಷಿಸಿದವರು. ಕುವೆಂಪು ಅವರಿಗೆ ಯಾವ ಭಾಷೆಯ ಮೇಲೂ ದ್ವೇಷವಿಲ್ಲ, ರೋಷವಿಲ್ಲ. ಕನ್ನಡ ನುಡಿಯ ಬಗ್ಗೆ ಅಪಾರವಾದ ಗೌರವವಿದೆ. ಅವರು ಯಾವ ವೇದಿಕೆಯಲ್ಲೇ ಭಾಷಣ ಮಾಡಿದರೂ ಸಹ ಕನ್ನಡ ಪರ ಆಲೋಚನೆಗಳು ಬಂದೇ ಬರುತ್ತಿದ್ದವು. ಅವರನ್ನು ಯಾರೇ ಭೇಟಿ ಮಾಡಿದರೂ ಸಹ ಅವರಿಗೆ ಕನ್ನಡ ಭಾಷೆಯ ಬಗ್ಗೆ ಉಪದೇಶಿಸುತ್ತಿದ್ದರು.

ಕರ್ನಾಟಕದಲ್ಲಿ ಶಿಕ್ಷಣ ಮಾಧ್ಯಮ ಮತ್ತು ಆಡಳಿತ ಮಾಧ್ಯಮಗಳು ಮಾತೃಭಾಷೆಯಲ್ಲಿಯೇ ನಡೆಯಬೇಕು ಎಂಬುದು ಕುವೆಂಪು ಅವರ ವಾದವಾಗಿತ್ತು. ಮಾತೃಭಾಷೆಯನ್ನು ಬಿಟ್ಟು ಅನ್ಯಭಾಷೆಯಲ್ಲಿ ಬೋಧನೆ ಮಾಡುವ ಶಿಕ್ಷಣ ಪೂರ್ಣಫಲ ನೀಡದು ಎಂಬುದು ಕುವೆಂಪು ಅವರ ಅಭಿವ್ಯಕ್ತಿಯಾಗಿತ್ತು. ಮಾತೃಭಾಷೆಯಲ್ಲಿ ಶಿಕ್ಷಣ ಪಡೆಯದ ವಿದ್ಯಾವಂತರ ಸ್ಥಿತಿ ಚಿಂತಾಜನಕವಾಗುತ್ತದೆ. ಇತ್ತ ಮಾತೃ ಭಾಷೆಯಲ್ಲೂ ಅಭಿವ್ಯಕ್ತಿ ಸಾಮರ್ಥ್ಯವಿಲ್ಲದೆ ಅತ್ತ ಅನ್ಯ ಭಾಷೆಯಲ್ಲೂ ಅಭಿವ್ಯಕ್ತಿ ಸಾಧ್ಯವಾಗದೆ ಹೋಗುವ ಸ್ಥಿತಿ ಉಂಟಾಗುತ್ತದೆ ಎಂಬುದು ಕುವೆಂಪು ಅವರ ಅಭಿಪ್ರಾಯವಾಗಿತ್ತು. ಹಾಗಾಗಿ ಕನ್ನಡ ಮಾಧ್ಯಮ ಶಿಕ್ಷಣಕ್ಕೆ ಅವರು ಹೆಚ್ಚು ಒತ್ತನ್ನು ನೀಡಿದ್ದರು. ಮಾತೃಭಾಷೆಯ ಮೂಲಕ ಶಿಕ್ಷಣ ನೀಡುವುದು, ಜನರ ಭಾಷೆಯಲ್ಲಿ ಆಡಳಿತ ವ್ಯವಹಾರ ನಡೆಸುವುದು ದೇಶದ ಹಿತದೃಷ್ಟಿಯಿಂದ, ಸಮಾಜದ ಹಿತದೃಷ್ಟಿಯಿಂದ ಅತ್ಯುತ್ತಮವಾದುದೆಂದು ಕವಿ ಕುವೆಂಪು ಅವರ ನಂಬಿಕೆಯಾಗಿದೆ.

ಕನ್ನಡದಲ್ಲಿ ಗಣನೀಯ ಸಾಹಿತ್ಯ ಸೃಷ್ಟಿ ಮಾತ್ರವಲ್ಲದೆ, ಕನ್ನಡ ಭಾಷೆ, ಸಾಹಿತ್ಯ ಅಭಿವೃದ್ಧಿಗಾಗಿ ಕನ್ನಡದ ಯಾವ ಸಾಹಿತಿಯೂ ಮಾಡದಷ್ಟು ಕೆಲಸವನ್ನು ಮಾಡಿರುವುದು ಕುವೆಂಪು ಅವರ ಹಿರಿಮೆಯಾಗಿದೆ. ವಿಶ್ವವಿದ್ಯಾಲಯದ ಉನ್ನತ ಅಧಿಕಾರದಲ್ಲಿದ್ದು, ವಿಶ್ವವಿದ್ಯಾಲಯದ ಮಟ್ಟದಲ್ಲೂ ಕನ್ನಡ ಮಾಧ್ಯಮವನ್ನು ಪ್ರಾರಂಭಿಸಲು ಶ್ರಮಿಸಿದರಲ್ಲದೆ, ವಿದ್ಯಾವಂತರಲ್ಲಿ, ಜನಸಾಮಾನ್ಯರಲ್ಲಿ ಕನ್ನಡದ ಬಗ್ಗೆ ವಾಸ್ತವಿಕವಾದ ಅರಿವು ಮೂಡಿಸಲು, ಅಭಿಮಾನ, ಪ್ರೇಮ, ಭಕ್ತಿಗಳನ್ನು ಬೆಳೆಸಲು ತಮ್ಮ ನುಡಿ ಮತ್ತು ಲೇಖನಗಳ ಮೂಲಕ ಗಮನಾರ್ಹ ಹೋರಾಟ ಮಾಡಿದ್ದಾರೆ.

ಬಲತ್ಕಾರದ ಹೇರಿಕೆಯನ್ನು ಬಲವಾಗಿ ಖಂಡಿಸಿರುವ ಕುವೆಂಪು ಅವರು ಭಾಷೆಯನ್ನು ಕಲಿಯಲು ಯಾರ ಮೇಲೂ ಯಾವ ಬಲತ್ಕಾರವನ್ನು ಹೇರಬಾರದು ಎನ್ನುತ್ತಾರೆ. ಸ್ವಂತ ಅಭಿಲಾಷೆಯಿಂದ ಯಾರೂ ಯಾವ ಭಾಷೆಯನ್ನಾದರೂ ಕಲಿಯುವ ಅವಕಾಶವಿರಬೇಕು. ಅದು ಅವರವರ ಪ್ರಯೋಜನ, ಸೌಲಭ್ಯದ ದೃಷ್ಟಿಯನ್ನು ಅವಲಂಬಿಸಿದೆ ಎನ್ನುತ್ತಾರೆ. ತ್ರಿಭಾಷಾ ಸೂತ್ರವನ್ನು ಖಂಡಿಸುವ ಕುವೆಂಪು ಅವರು ಮಾತೃಭಾಷೆಯ ಜೊತೆಗೆ ಉಪಯೋಗಕ್ಕೆ ಬೇಕಾದಷ್ಟು ಇಂಗ್ಲೀಷ್ ಭಾಷೆಯನ್ನು

(ಅದು ಬಲವಂತವಾಗಿರಬಾರದು) ಬಳಸಬೇಕು ಎಂದು ದ್ವಿಭಾಷಾ ಸೂತ್ರವನ್ನು ಅಳವಡಿಸಿಕೊಳ್ಳುವಂತೆ ಕವಿ ಕುವೆಂಪು ಸಲಹೆಯನ್ನು ಕೊಡುತ್ತಾರೆ. ಈ ಹಿನ್ನೆಲೆಯಲ್ಲಿ ಕುವೆಂಪು ರಚಿತ ಕವನಗಳಲ್ಲಿ ಅವರ ಕನ್ನಡಪರ ಚಿಂತನೆಗಳು ಹೇಗೆ ವೈಜ್ಞಾನಿಕವಾಗಿ, ವಾಸ್ತವದ ನೆಲೆಗಟ್ಟಿನ ಮೇಲೆ ಮೂಡಿಬಂದಿವೆ ಎಂಬುದನ್ನು ಅವರ ಕವನಗಳ ಮೂಲಕ ತಿಳಿಯಬಹುದಾಗಿದೆ.

ಕನ್ನಡ ನುಡಿಯ ಬಗ್ಗೆ ಅಭಿಮಾನ, ಕುವೆಂಪು ಅವರಲ್ಲಿ ಅಭಿವ್ಯಕ್ತಗೊಂಡಿರುವಂತೆ ಆಧುನಿಕ ಸಾಹಿತ್ಯದ ಇತರರಲ್ಲಿ ಕಂಡುಬರುವುದು ವಿರಳ. ಕುವೆಂಪು ಅವರ ಎಲ್ಲಾ ಸಾಹಿತ್ಯದ ಒಳ ಧ್ವನಿಗಳು ಕನ್ನಡಿಗರ ಒಳಿತು ಉದ್ಧಾರಗಳನ್ನೇ ಒಳಗೊಂಡಿರುವುದು ಅರ್ಥಪೂರ್ಣವಾಗಿದೆ.

"ತನ್ನ ನಾಡಿನ ನಡೆನುಡಿ,-ತನ್ನ ತಾಯ್ನುಡಿ
ಎಂದು ಹಿಗ್ಗದ ಮಾನವನಿದ್ದರೆ
ತಾವಿಲ್ಲವನಿಗೆ ನಾಕದಲಿ- ವೀರ ಲೋಕದಲಿ"

ತನ್ನ ದೇಶ, ತನ್ನ ಭಾಷೆಗಳ ಬಗ್ಗೆ ಹೆಮ್ಮೆ ಪಡದವನಿಗೆ ನರಕದಲ್ಲೂ ಸ್ಥಾನವಿಲ್ಲ ಎಂಬುದು ಕುವೆಂಪು ಅವರ ಅಭಿಮತವಾಗಿದೆ. ತಾಯ್ನುಡಿಗಾಗಿ ದುಡಿದು ಮಡಿಯುವಂತೆ ಕನ್ನಡಿಗರಿಗೆ ಕವಿ ಕುವೆಂಪು ಪ್ರಾರ್ಥಿಸುತ್ತಾರೆ. ಪಂಪ-ರನ್ನರ, ಬಸವ-ಹರಿಹರರ, ನಾರಣಪ್ಪ- ಲಕ್ಷ್ಮೀಶರ ಹಿರಿಮೆಯನ್ನು ಮರೆತೆಯಾದರೆ, ಅವರ ಕನ್ನಡವನ್ನು ಮರೆತೆಯಾದರೆ ಅದು ಸಾವಿಗೆ ಸಮಾನ ಎನ್ನುತ್ತಾರೆ ಕುವೆಂಪು.

"ಎಲ್ಲಾದರು ಇರು; ಎಂತಾದರು ಇರು;
ಎಂದೆಂದಿಗು ನೀ ಕನ್ನಡವಾಗಿರು
ಕನ್ನಡ ಗೋವಿನ ಓ ಮುದ್ದಿನ ಕರು
ಕನ್ನನಡತನವೊಂದಿದ್ದರೆ ನೀನಮ್ಮಗೆ ಕಲ್ಪತರು!

ನೀ ಮೆಟ್ಟುವ ನೆಲ – ಅದೆ ಕರ್ನಾಟಕ
ನೀನೇರುವ ಮಲೆ – ಸಹ್ಯಾದ್ರಿ
ನೀ ಮುಟ್ಟುವ ಮರ – ಶ್ರೀಗಂಧದಮರ
ನೀ ಕುಡಿಯುವ ನೀರ್- ಕಾವೇರಿ
ಎಲ್ಲಿದ್ದರೆ ಏನ್? ಎಂತಿದ್ದರೆ ಏನ್?
ಎಂದೆಂದಿಗು ತಾನ್- ಕನ್ನಡವೇ ಸತ್ಯ ।
ಕನ್ನಡವೇ ನಿತ್ಯ ।"

ಹೊಟ್ಟೆ ಬಟ್ಟೆಗಳ ಪೊರೈಕೆಯೊಂದೇ ಮಾನವನ ಸಾಧನೆಯಾಗಬಾರದು. ನಾಡು-ನುಡಿ ನೆಲ, ಜಲ, ಸಂಸ್ಕೃತಿ, ಆಚಾರ-ವಿಚಾರಗಳ ಕುರಿತಾದ ಅಭಿಮಾನ ಆತನಲ್ಲಿ ಮೂಡಬೇಕು. ***"ಒಬ್ಬ ಕನ್ನಡಿಗ ಅಂಡೀಸ್ ಪರ್ವತವನ್ನು ಏರುವಾಗ ಸಹ್ಯಾದ್ರಿ ಸುಖವನ್ನು ಅನುಭವಿಸಬೇಕು; ಥೇಮ್ಸ್ ನದಿಯ ನೀರು ಕಾವೇರಿಯ ನೆನಪು ತರಬೇಕು"*** ಜಗತ್ತಿನ ಯಾವ ಮೂಲೆಯಲ್ಲಿ ಇದ್ದರೂ ಸಹ ಕನ್ನಡಿಗ ಕನ್ನಡ ಪ್ರಜ್ಞೆಯಿಂದ ವಂಚಿತನಾಗಬಾರದು ಎಂಬುದು ಕವಿಯ ಆಶಯವಾಗಿದೆ. ಕನ್ನಡತನ ಉಳ್ಳವನು ಇದ್ದಲ್ಲಿಯೇ ಕರ್ನಾಟಕವಾಗುತ್ತದೆ. ಅವನು ಮುಟ್ಟಿದ್ದು ಶ್ರೀಗಂಧದ ಮರವಾಗುತ್ತದೆ. ಕುಡಿಯುವ ನೀರು ಕಾವೇರಿ ನೀರಾಗುತ್ತದೆ; ಹತ್ತುವ ಬೆಟ್ಟ ಸಹ್ಯಾದ್ರಿ ಬೆಟ್ಟವಾಗುತ್ತದೆ. ಪಂಪ, ರನ್ನ, ಹರಿಹರ, ಕುಮಾರವ್ಯಾಸಾದಿಗಳನ್ನು ಓದುವವನು, ಬೆಳ್ಗೊಳ ಬೇಲೂರುಗಳ ಕಲಾ ವೈಭವವನ್ನು ನೆನೆಯುವವನು ಎಲ್ಲಿದ್ದರೂ ಹೇಗಿದ್ದರೂ ಕನ್ನಡಿಗನೇ ಎಂಬ ಅವಿನಾಭಾವ ಕಲ್ಪನೆ ಮುಖ್ಯವೆಂದು ಕವಿ ಕುವೆಂಪು ಅವರ ಆಶಯ ಹಾಗೂ ಅವರು ಕನ್ನಡಿಗರಿಗೆ ಕೊಟ್ಟ ಕರೆಯಾಗಿದೆ.

"ಕನ್ನಡಕೆ ಹೋರಾಡು ಕನ್ನಡದ ಕಂದಾ
ಕನ್ನಡವ ಕಾಪಾಡು ನನ್ನ ಆನಂದಾ
ಜೋಗುಳದ ಹರಕೆಯಿದು ಮರೆಯದಿರು ಚಿನ್ನಾ
ಮರೆತೆಯಾದರೆ ಅಯ್ಯೊ ಮರೆತಂತೆ ನನ್ನ !"

ಹುಟ್ಟುತ್ತಲೆ ಬರುವ ಗುಣ ಕೊನೆಯವರೆಗೂ ಶಾಶ್ವತವಾಗಿ ಉಳಿಯುತ್ತದೆ. ಹಾಗಾಗಿ ಕವಿ ಕುವೆಂಪು ಅವರು ಹಸುಗೂಸಿಗೆ ಹಾಲೆರೆಯುವಾಗ, ಜೋಗುಳ ಹಾಡಿ ಮಲಗಿಸುವಾಗ ಕನ್ನಡ ಹಾಡನ್ನು ಹಾಡಬೇಕು ಎನ್ನುತ್ತಾರೆ. ಮಕ್ಕಳ ಧಮನಿ ಧಮನಿಗಳಲ್ಲಿ ಕನ್ನಡ ಡಿಂಡಿಮ ಪ್ರತಿಬಿಂಬಿಸಬೇಕು; ಅವರ ಅಂಗಾಂಗಗಳಲ್ಲಿ ಕನ್ನಡ ಶಕ್ತಿ ಪ್ರವಹಿಸಬೇಕು; ಅವರ ಕನಸ್ಸು ನನಸ್ಸುಗಳಲ್ಲಿ ಕನ್ನಡದ ಕೆಚ್ಚು ಮೂಡಬೇಕು. ಅಂಥವರು ಮಾತ್ರ ಮುಂದೆ ಕನ್ನಡ ಸೇನಾನಿಯಾಗುತ್ತಾರೆ ಎಂಬುದು ಕುವೆಂಪು ಅವರ ಅಭಿಪ್ರಾಯವಾಗಿತ್ತು.

ಕುವೆಂಪು ಅವರ ಕನ್ನಡದ ಅಭಿಮಾನ ಎಂದೂ ಸಂಕುಚಿತವಾದದ್ದಲ್ಲ. ಕರ್ನಾಟಕದಲ್ಲಿದ್ದು ಭಾರತ ದರ್ಶನವನ್ನೂ ಆ ಮೂಲಕ ವಿಶ್ವಪ್ರಜ್ಞೆಯನ್ನೂ ರೂಢಿಸಿಕೊಳ್ಳಬೇಕೆಂಬುದು ಅವರ ಆಶಯ. "ಜೈ ಭಾರತ ಜನನಿಯ ತನುಜಾತೆ! ಜಯಹೇ ಕರ್ನಾಟಕ ಮಾತೆ" ಇದು ಈ ದರ್ಶನವನ್ನು ಸಾರುವ ಗೀತೆಯಾಗಿದೆ. ಪ್ರತಿಯೊಬ್ಬ ಕನ್ನಡಿಗನಿಗೂ ಕವಿ ಕೊಡುವ ದೀಕ್ಷೆ ಇದು; "ಕನ್ನಡಕ್ಕಾಗಿ ಕೈಯೆತ್ತು, ನಿನ್ನ ಕೈ ಕಲ್ಪವೃಕ್ಷವಾಗುತ್ತದೆ; ಕನ್ನಡಕ್ಕಾಗಿ ಕೊರಳೆತ್ತು; ಅಲ್ಲಿ ಪಾಂಚಜನ್ಯ ಮೊಳಗುತ್ತದೆ! ಕನ್ನಡಕ್ಕಾಗಿ ಕಿರುಬೆರಳೆತ್ತಿದರೂ ಸಾಕು, ಇಂದು ಅದೇ ಗೋವರ್ಧನ ಗಿರಿಯಾಗುತ್ತದೆ!" ಹೀಗೆ ಕನ್ನಡದ ಮೂಲಕ ಕನ್ನಡಿಗ ಬೆಳೆದು ವಿಶ್ವಮಾನವನಾಗಬೇಕೆಂದು ಪ್ರತಿಪಾದಿಸುತ್ತಾರೆ.

ಕನ್ನಡ ಶಿಕ್ಷಣ ಮಾಧ್ಯಮವಾಗಬೇಕು, ಆಡಳಿತ ಭಾಷೆಯಾಗಬೇಕು ಎಂದು ಕುವೆಂಪು ಅವರು ಮೊದಲಿನಿಂದಲೂ ಹೇಳುತ್ತಾ ಬಂದಿದ್ದಾರೆ; ಎಚ್ಚರಿಸುತ್ತಾ ಬಂದಿದ್ದಾರೆ; ಪರಭಾಷೆಯ ಮಾಧ್ಯಮದ ಮೂಲಕ ಕನ್ನಡ ಮಕ್ಕಳ ಪ್ರತಿಭೆ ಸಹಜವಾಗಿ ಅರಳಿ ಬೆಳೆಯಲು ಸಾಧ್ಯವಿಲ್ಲ ಎಂದು ತಿಳಿಯ ಹೇಳುತ್ತಾ ಬಂದಿದ್ದಾರೆ. ಹಾಗಾಗಿ ಕನ್ನಡ ನಾಡಿನಲ್ಲಿ ಶಿಶುವಿಹಾರದಿಂದ ಸ್ನಾತಕೋತ್ತರ ತರಗತಿಯ ತನಕ ಕನ್ನಡ ಭಾಷೆಯೇ ಶಿಕ್ಷಣ ಮಾಧ್ಯಮವಾಗಬೇಕು. ಕರ್ನಾಟಕದಲ್ಲಿ ಎಲ್ಲಾ ವಿಶ್ವವಿದ್ಯಾನಿಲಯಗಳ ಎಲ್ಲಾ ಕಾಲೇಜುಗಳಲ್ಲೂ ಪಾಠ ಭಾಷೆ, ಪ್ರವಚನ ಭಾಷೆ, ಪರೀಕ್ಷೆಯ ಭಾಷೆ-ಈ ಮೂರು ಕನ್ನಡದಲ್ಲೇ ಇರಬೇಕು. ನ್ಯಾಯಾಲಯದಲ್ಲಿ ಆಪಾದನೆ, ವಿಚಾರಣೆ, ವಾದ ಪ್ರತಿವಾದ, ತೀರ್ಪು-ಎಲ್ಲವೂ ಕನ್ನಡದಲ್ಲಿರಬೇಕು. ಕೋರ್ಟು, ಕಛೇರಿ, ಬ್ಯಾಂಕು, ಅಂಚೆ, ಸಾರಿಗೆ ಸಂಪರ್ಕ-ಎಲ್ಲೆಡೆಯಲ್ಲೂ ಕನ್ನಡದಲ್ಲೇ ವ್ಯವಹರಿಸಬೇಕು ಎಂದು ನುಡಿಯುವ ಕುವೆಂಪು ಅವರ ಈ ಪ್ರತಿಪಾದನೆಯಲ್ಲಿ ಹುರುಳಿದೆ, ತಿರುಳಿದೆ ಎಂಬುದು ಅನ್ಯ ಭಾಷೆಗೆ ತಮ್ಮನ್ನು ಮಾರುಗೊಂಡು ಪರಭಾಷಾ ವ್ಯಾಮೋಹದ ಸುಳಿಯಲ್ಲೇ ಸುರುಳಿ ಸುತ್ತಿಕೊಂಡ ಅಭಿಮಾನ ಶೂನ್ಯರಿಗೆ ತಿಳಿಯದೆ ಇರಬಹುದು. ಆದರೆ ನಿರ್ಲಿಪ್ತರಾಗಿ ಪರಿಭಾವಿಸಿದ ಶ್ರೀ ಸಾಮಾನ್ಯನಿಗೂ ಇದರ ಔಚಿತ್ಯ ತಿಳಿಯುತ್ತದೆ. ಮಹಾಕವಿ ಕುವೆಂಪು ಅವರು ಅನ್ಯ ಭಾಷೆಗಳಿಗೆ ತಮ್ಮ ವ್ಯಕ್ತಿತ್ವವನ್ನೇ ಸೂರೆಗೊಟ್ಟು ದಾಸರಾದವರನ್ನು ಸಂಭೋದಿಸುತ್ತಾ, ಅಂಥವರ ಮರುಳು ಮಾತುಗಳಿಗೆ ಒಳಗಾದವರಿಗೆ

"ಸಾಯುತಿದೆ ನಿಮ್ಮ ನುಡಿ, ಓ ಕನ್ನಡದ ಕಂದರಿರಾ
ಹೊರನುಡಿಯ ಹೊರೆಯಿಂದ ಕುಸಿದು ಕುಗ್ಗಿ !
ರಾಜನುಡಿಯೆಂದೊಂದು ರಾಷ್ಟ್ರನುಡಿಯೆಂದೊಂದು
ದೇವನುಡಿಯೆಂದೊಂದು ಹತ್ತಿಜಗ್ಗಿ
ನಿರಿನಿಟಿಲು ನಿಟಿಲೆಂದು ಮುದಿಮೂಳೆ ಮುರಿಯುತಿದೆ
ಕನ್ನಡಮ್ಮನ ಬೆನ್ನು ಬಳುಕಿ ಬಗ್ಗಿ !
ಕೂಗಿಕೊಳ್ಳಲು ಕೂಡ ಬಲವಿಲ್ಲ; ಮಕ್ಕಳೇ
ಬಾಯ್ಮುಚ್ಚಿ ಹಿಡಿದಿಹರು ಕೆಲರು ನುಗ್ಗಿ
ಇರುವಲ್ಪ ಶಕ್ತಿಯನು ಇರುವಲ್ಪ ದ್ರವ್ಯವನು
ಪರಭಾಷೆ ಮೋಹಕ್ಕೆ ಚೆಲ್ಲಬೇಡಿ
ಹೂಮಾಲೆ ಸೂಡುವೆವು ಕೊರಳಿಂಗೆ ಎಂದೆನುತ
ನೇಣುರುಳ ಸೆಳೆದಯ್ಯೊ ಕೊಲ್ಲಬೇಡಿ
ಪರಕೀಯರೆಲ್ಲರಾಶೀರ್ವಾದ ಕರವೆತ್ತಿ
ಹರಸುತ್ತ ಬರುವರ್ರೆ ಮೊದಲು ಮೊದಲು
ಕಡೆಗದುವೆ ಕುತ್ತಿಗೆಗೆ ಕರವಾಳವಾಗುವುದು
ನಮ್ಮ ನಾಲಗೆ ನಮಗೆ ಕೀಳು ತೊದಲು !"

ಎಂದು 'ಸಾಯುತಿದೆ ನಿಮ್ಮ ನುಡಿ, ಓ ಕನ್ನಡದ ಕಂದರಿರಾ!' ಎಂಬ ಕವನದ ಸಾಲುಗಳಲ್ಲಿ ಕುವೆಂಪುರವರು ಎಚ್ಚರಿಕೆಯ ಕರೆ ಕೊಡುತ್ತಾರೆ. ಕನ್ನಡ ನಾಡಿನ ಪ್ರತಿಯೊಂದು ಹಂತದಲ್ಲೂ ಪ್ರತಿಯೊಂದು ಕ್ಷೇತ್ರದಲ್ಲೂ ಕನ್ನಡವೇ ಸಾರ್ವಭೌಮ ಭಾಷೆಯಾಗಿ ವಿಜ್ರುಂಭಿಸಬೇಕು. ರಾಜನುಡಿಯೆಂದು, ರಾಷ್ಟ್ರನುಡಿಯೆಂದು, ದೇವನುಡಿಯೆಂದು ಇಂಗ್ಲೀಷ, ಹಿಂದಿ, ಸಂಸ್ಕೃತ ಭಾಷೆಗಳು ಕನ್ನಡದ ಮೇಲೆ ದಬ್ಬಾಳಿಕೆ ನಡೆಸುತ್ತಿರುವ, ಸವಾರಿ ಮಾಡುತ್ತಿರುವ ರೀತಿಯನ್ನು ತಿಳಿಸುತ್ತಲೇ ಈ ಭಾಷೆಗಳ ದಬ್ಬಾಳಿಕೆಯಿಂದಾಗಿ ಕನ್ನಡ ನುಡಿಯ ಅಸ್ತಿತ್ವ ಸ್ಥಾನಮಾನಗಳು ಕುಗ್ಗತೊಡಗಿರುವುದನ್ನೂ ನಾಶವಾಗುತ್ತಿರುವುದನ್ನೂ ಮೇಲಿನ ಸಾಲುಗಳಲ್ಲಿ ಕುವೆಂಪುರವರು ಮನಮುಟ್ಟುವಂತೆ ಪ್ರತಿಪಾದಿಸುತ್ತಾರೆ. ಕವನದ ಮುಂದಿನ ಸಾಲುಗಳಲ್ಲಿ ನಮ್ಮದಲ್ಲದ ಪರಭಾಷಾ ವ್ಯಾಮೋಹಕ್ಕೆ ಬಲಿಯಾಗಿ ***'ಇರುವೆಲ್ಲಾ ದ್ರವ್ಯವನು ಚೆಲ್ಲುವುದು ವಿವೇಕವಲ್ಲ'*** ಎಂದು ನುಡಿದು ತಾಯಿ ತನ್ನ ಮಗುವಿಗೆ ಹಾಲುಣಿಸುವಾಗ ಅಕ್ಕರೆಯಿಂದ ನುಡಿದ ಭಾಷೆಯೇ ಆ ಮಗುವಿನ ಕಲಿಕಾ ಮಾಧ್ಯಮವಾಗಬೇಕೆಂಬ ಸತ್ಯವನ್ನು ಸಾರಿ ಹೇಳುತ್ತಾರೆ.
ಕುವೆಂಪುರವರ ಈ ಅಭಿಪ್ರಾಯಗಳು ಸತ್ಯದ ಅಮೃತ ನುಡಿಗಳು. ಆಯಾ ಪ್ರಾಂತೀಯ ಭಾಷೆಗೆ ಪ್ರಥಮ ಪ್ರಾಶಸ್ತ್ಯ ಪ್ರಾಪ್ತವಾಗಬೇಕು. ಶಿಕ್ಷಣ ಕ್ಷೇತ್ರದ ಹಾಗೂ ಆಡಳಿತದ ವೈಖರಿಗಳಲ್ಲಿ ಕನ್ನಡದ ಸತ್ವ ಪ್ರವಹಿಸಬೇಕು. ಇಂಗ್ಲಿಷ್ ಈಗ ಇರುವ ತನ್ನ ಬಲಾತ್ಕಾರದ ಸ್ಥಾನದಿಂದ ಐಚ್ಛಿಕ ಸ್ಥಾನಕ್ಕೆ ನಿಯಂತ್ರಣವಾಗಬೇಕು. ಏಕೆಂದರೆ ನಮ್ಮ ದಿನ ನಿತ್ಯದ ತಾಯಿ ನುಡಿಯ ಮೂಲಕ ತಿಳಿಸಿದಾಗ ಗಹನವಾದ ವಿಚಾರವು ಸರಳ ಸುಲಭವಾಗಿ ತಿಳಿಯಲು ಸಾಧ್ಯ. ಹಾಗಾಗಿ ಕನ್ನಡ ನುಡಿಯನ್ನು ನಾವು ಬಳಸಿ ಉಳಿಸಿ ಬೆಳೆಸಿಕೊಂಡರೆ ಮಾತ್ರ ನಮ್ಮ ನಿಜವಾದ ವ್ಯಕ್ತಿತ್ವವನ್ನು ಮೆರೆಯಲು, ಬೌದ್ಧಿಕ ಸಾಧನೆ ಮಾಡಲು ಸಾಧ್ಯವಾಗುತ್ತದೆ
ಮಹಾಕವಿ ಕುವೆಂಪುರವರು ಈ ವಿಷಯಕ್ಕೆ ಮುಂದುವರಿಕೆಯಾಗಿ ಇಂಗ್ಲೀಷಿನ ಬಲಾತ್ಕಾರವನ್ನು ***'ಸಾಕು ಈ ಬಲಾತ್ಕಾರ'*** ಎಂಬ ಕವನದಲ್ಲಿ ಹೀಗೆ ನಿವೇದಿಸಿದ್ದಾರೆ

"ಇಂಗಿ ಹೋಗುತಿದೆ ಇಂಗ್ಲೀಷಿನ ಮರುಭೂಮಿಯಲಿ
ನಿನ್ನ ಮಕ್ಕಳ ಶಕ್ತಿ–ಬುದ್ಧಿ–ಪ್ರತಿಭಾ;
ರಾಷ್ಟ್ರನಾಯಕ ಮನದಿ ವಿವೇಕರೂಪದಿ ಮೂಡಿ,
ಓ ರಸಮಯಿಯ ಸರಸ್ವತಿಯೆ, ಮೊರೆ ಬಾ!
ಕಲ್ಲ ಕುಂಡದಿ ನೆಟ್ಟ ಅಶ್ವತ್ಥ ಸಸಿಯಂತೆ
ಕಿಮುಳ್ಚಿ ಗುಜ್ಜಾಗುತಿದೆ ಮೊಳೆವ ಚೈತನ್ಯ;
ಭೂಮಿಯಲಿ ಬೇರೂರಿ, ಬಾನೆಡೆಗೆ ತಲೆಯೆತ್ತಿ
ನಿಲುವವರಿಗೇತಕೀ ದಾಸ್ಯದೈನ್ಯ?

ಗಾಂಧಿಯಿಂದಿಂಗ್ಲಿಷರ ದಾಸ್ಯದಿಂದ ಪಾರಾದೆ
ಅವನ ಕೊಂದಿಂಗ್ಲಿಷಿಗೆ ದಾಸಿಯಾದೆ.
ಓ ತಾಯಿ ಭಾರತಿಯೆ, ಚೀಣೀಯರನೆ ಮೀರಿ
ಹಿಂಡುತಿದೆ ಕಂದರನು ಇಂಗ್ಲೀಷಿನ ಮಾರಿ!"

ಮೇಲಿನ ಕವಿತೆಯ ಸಾಲುಗಳು ತುಂಬಾ ಅರ್ಥಗರ್ಭಿತವಾಗಿ ಮೂಡಿಬಂದಿವೆ ಕವಿಯ ಅಂತರಾಳದಿಂದ. ಅವುಗಳನ್ನು ಮತ್ತೆ ಮತ್ತೆ ಓದಿ ಮನನ ಮಾಡಿ ಅರ್ಥೈಸಬೇಕು. ಇಂಗ್ಲಿಷನ್ನು ಬಲವಂತವಾಗಿ ಶಿಕ್ಷಣ ಮಾಧ್ಯಮದ ಭಾಷೆಯನ್ನಾಗಿ ಮಾಡಿದರೆ ಕನ್ನಡ ಮಕ್ಕಳ ಶಕ್ತಿ– ಬುದ್ಧಿ– ಪ್ರತಿಭೆಗಳು ಸರಿಯಾಗಿ ಅಭಿವೃದ್ಧಿ ಹೊಂದದೆ ಇಂಗ್ಲೀಷ್ ಎಂಬ ಮರುಭೂಮಿಯಲ್ಲಿ ಇಂಗಿ ಹೋಗುತ್ತವೆ ಎಂದೂ ಕಲ್ಲ ಕುಂಡದಲ್ಲಿ ನೆಟ್ಟ ಅಶ್ವತ್ಥ ಸಸಿಯಂತೆ ಬೆಳೆಯಲಾರದೆ ಕುಬ್ಜಗೊಳ್ಳುತ್ತವೆ ಎಂದೂ ಇಲ್ಲಿ ಮಾರ್ಮಿಕವಾಗಿ ಹೇಳಲಾಗಿದೆ. ಇಂಗ್ಲಿಷಿನವರು ನಮ್ಮ ದೇಶ ಬಿಟ್ಟು ಹೋದರು ಅವರ ಭಾಷೆಯ ಮೂಲಕ ನಾವು ದಾಸ್ಯ ಮನೋಭಾವವನ್ನು ಇನ್ನೂ ಹೊಂದಿರುವ ಅಂಶವನ್ನು ಸರಿಯಾಗಿಯೇ ಗುರುತಿಸಿ ಹೇಳಿದ್ದಾರೆ ಕವಿ ಕುವೆಂಪುರವರು.
ಭಾರತದಂತಹ ಅಭಿವೃದ್ಧಿ ಹೊಂದುತ್ತಿರುವ ದೇಶಕ್ಕೆ ಪರಭಾಷೆಯ ಕಲಿಕೆಗಾಗಿ ಖರ್ಚು ಮಾಡುವ ಹಣ ವ್ಯರ್ಥವಾದದ್ದು, ಪ್ರಗತಿಗೆ ಮಾರಕವಾದದ್ದು, ನಮ್ಮ ನಾಡಿನ ಮಕ್ಕಳ ಶಕ್ತಿಯೆಲ್ಲ ಪರಭಾಷೆ ಕಲಿಯುವುದರಲ್ಲೇ ವ್ಯಯವಾಗುತ್ತಿದೆ. ಕನ್ನಡ ವಿಷಯ ಸಂಗ್ರಹಣೆಗೆ ಶಕ್ತಿಯಿಲ್ಲದೆ ಅವರು ದಡ್ಡರಾಗುತ್ತಿದ್ದಾರೆ ಎಂದು ಕವಿ ಕುವೆಂಪುರವರು ವಿಷಾದಿಸುತ್ತಾರೆ.

"ಹೆಣಭಾರ ಹೆಣಭಾರ ಸಾಕೀ ಬಲಾತ್ಕಾರ
ಸಾಕು ನಿಲ್ಲಿಸಿ, ನಿಮಗೆ ಬೇಕಾದರುದ್ಧಾರ.
ಇಂಗ್ಲೀಷಿನ ಚಪ್ಪಡಿಯಡಿಯ ಹಸುಳೆ ಚೀತ್ಕಾರ
ಕೇಳಿಸದ ಕಿವುಡರಿರ, ನಿಮಗೇಕೆ ಅಧಿಕಾರ?
ಕೇಳಿಯೂ ಧಿಮ್ಮನಿರೆ, ಕೂಗಿ ಧಿಕ್ಕಾರ.."

ಶಾಲೆಯಲ್ಲಿ ಎಲ್ಲಾ ಮಕ್ಕಳಿಗೂ ಇಂಗ್ಲೀಷನ್ನು ಕಡ್ಡಾಯವಾಗಿ ಕಲಿಯಲು ಸರ್ಕಾರ ತೀರ್ಮಾನಿಸಿದಾಗ, ಅದರಿಂದಾಗುವ ಹಾನಿಯನ್ನು ಕುವೆಂಪು ದನಿಯೆತ್ತಿ ಕೂಗಿದರು. ರಾಜಕಾರಣಿಗಳ ತೀರ್ಮಾನವನ್ನು ಬಹಿಷ್ಕರಿಸಿದರು. ಭಾವೈಕ್ಯತೆಯನ್ನು ಭಾಷೆಯಿಂದ ಸಾಧಿಸಲು ಸಾಧ್ಯತೆ ಇದೆ. ಆದರೆ ಅದು ಮಾತೃಭಾಷೆಯಿಂದ ಮಾತ್ರ ಸಾಧ್ಯವೇ ಹೊರತು ಇತರ ಭಾಷೆಗಳಿಂದ ಸಾಧಿಸಲು ಸಾಧ್ಯವಿಲ್ಲ ಎಂದು ಮಾತೃಭಾಷೆಯ ಪ್ರಾಮುಖ್ಯತೆಯನ್ನು ನಾಡಿಗೆ ಸಾರಿದರು.

"ಬಾರಿಸು ಕನ್ನಡ ಡಿಂಡಿಮವ,
ಓ ಕರ್ನಾಟಕ ಹೃದಯಶಿವ!
ಸತ್ತಂತಿಹರನು ಬಡಿದೆಚ್ಚರಿಸು;
ಕಚ್ಚಾಡುವವರನು ಕೂಡಿಸಿ ಒಲಿಸು.
ಹೊಟ್ಟೆಯಕಿಚ್ಚಿಗೆ ಕಣ್ಣೀರ್ ಸುರಿಸು;
ಒಟ್ಟಿಗೆ ಬಾಳುವ ತೆರದಲಿ ಹರಸು!
ಬಾರಿಸು ಕನ್ನಡ ಡಿಂಡಿಮವ,

ಓ ಕರ್ನಾಟಕ ಹೃದಯಶಿವ!
ಕ್ಷಯಿಸೆ ಶಿವೇತರ ಕೃತಿಕೃತಿಯಲ್ಲಿ
ಮೂಡಲಿ ಮಂಗಳ ಮತಿಮತಿಯಲ್ಲಿ;
ಕವಿ ಋಷಿ ಸಂತರ ಆದರ್ಶದಲಿ
ಸರ್ವೋದಯವಾಗಲಿ ಸರ್ವರಲಿ!
ಬಾರಿಸು ಕನ್ನಡ ಡಿಂಡಿಮವ,
ಓ ಕರ್ನಾಟಕ ಹೃದಯಶಿವ!"

ಕನ್ನಡ ಡಿಂಡಿಮದ ಕಾರ್ಯ ಕೇವಲ ತಾಯ್ನುಡಿಯ ಸೇವೆಯಲ್ಲ. ಪರಸ್ಪರ ಕಲಹದಲ್ಲಿ ನಿರತರಾದವರನ್ನು ಒಗ್ಗೂಡಿಸುವುದು; ಸಹಬಾಳ್ವೆ ನಡೆಸುವಂತೆ ಮಾಡುವುದು–ಕುವೆಂಪುರವರ ಕನ್ನಡ ಪ್ರೇಮ, ಅಭಿಮಾನದ ಔನ್ನತ್ಯವನ್ನು ವರ್ಣಿಸುವಲ್ಲಿ ಮಾತುಗಳೇ ಇಲ್ಲ. ವೈಚಾರಿಕತೆ ಮತ್ತು ವೈಜ್ಞಾನಿಕ ದೃಷ್ಟಿಗಳನ್ನೊಳಗೊಂಡ ಮನುಜಮತವೇ ವಿಶ್ವಪಥ ಎಂಬ ದೃಷ್ಟಿಯಿಂದ ಮೂಡಿ ಬಂದಿರುವುದರಿಂದ ಅದು ಸಾರ್ವಕಾಲಿಕ.

ಕುವೆಂಪುರವರು ಸಮಾಜದಲ್ಲಿ ಮೂಲಭೂತವಾದ ವೈಚಾರಿಕ ಕ್ರಾಂತಿಯನ್ನು ಬಯಸಿದರು. ಕನ್ನಡ ಭಾಷೆ–ಸಾಹಿತ್ಯದ ಬಗ್ಗೆ ಅವರ ಕಾಳಜಿ, ಅವರ ವ್ಯಕ್ತಿತ್ವದ ಒಂದು ಅಂಗವೇ ಆಗಿತ್ತೆಂಬುದನ್ನು ಅವರ ಕವನಗಳು ಪ್ರತಿನಿಧಿಸುತ್ತವೆ. ಕೊನೆಯವರೆಗೂ ಕನ್ನಡದಲ್ಲಿ ನಿಷ್ಠೆಯನ್ನಿರಿಸಿಕೊಂಡು, ಅದರ ಅಭ್ಯುದಯಕ್ಕಾಗಿಯೇ ಬಾಳಿದವರು ಕುವೆಂಪು. ಹಾಗಾಗಿ ಸರ್ಕಾರ, ಜನತೆ ಇದರ ಬಗ್ಗೆ ವಿಶೇಷವಾದ ಗಮನಹರಿಸಿ ಕುವೆಂಪುರವರ ಕನ್ನಡ ಪರವಾದ ವೈಜ್ಞಾನಿಕ ಚಿಂತನೆಗಳನ್ನು ಅನುಷ್ಠಾನಕ್ಕೆ ತಂದರೆ, ನಾಡು–ನುಡಿ ಬೆಳೆದು, ಕನ್ನಡ ಮಕ್ಕಳ ಭವಿಷ್ಯ ಉಜ್ವಲವಾಗುವುದರಲ್ಲಿ ಎಳ್ಳಷ್ಟು ಸಂದೇಹವಿಲ್ಲ.

**ಪರಾಮರ್ಶನ ಗ್ರಂಥಗಳು**


1. ಪ್ರೊ. ಎ. ವಿ. ನಾವಡ 2000 ಕುವೆಂಪು ಸಮಗ್ರ ಕಾವ್ಯ, ಸಂಪುಟ–1, ನಿರ್ದೇಶಕರು, ಪ್ರಸಾರಾಂಗ, ಕನ್ನಡ ವಿ. ವಿ., ಹಂಪಿ.
2. ಪ್ರೊ. ಎ. ವಿ. ನಾವಡ 2000 ಕುವೆಂಪು ಸಮಗ್ರ ಕಾವ್ಯ, ಸಂಪುಟ–2, ನಿರ್ದೇಶಕರು, ಪ್ರಸಾರಾಂಗ, ಕನ್ನಡ ವಿ. ವಿ., ಹಂಪಿ.
3. ಎಸ್. ವಿ. ಪರಮೇಶ್ವರಭಟ್ಟ 1995 ರಸಋಷಿ ಕುವೆಂಪು, ಪ್ರಸಾರಾಂಗ, ಮೈ.ವಿ.ವಿ, ಮೈಸೂರು.
4. ಡಾ. ಹಂ.ಪ.ನಾಗರಾಜಯ್ಯ 2010 ಕುವೆಂಪು ಕುರಿತ ಚಿಂತನೆಗಳು, ಸುಂದರ ಪ್ರಕಾಶನ, ಬೆಂಗಳೂರು.
5. ಪ್ರೊ. ಸಿ.ಪಿ ಸಿದ್ಧಾಶ್ರಮ 2015 ವಿಲಂಘನ, ಉಷಾ ಪ್ರಕಾಶನ, ಮೈಸೂರು.
6. ಡಾ. ಎಸ್. ರೇಣುಕಾ 2004 ಮಹಾಚೇತನಗಳೆರಡರ ಏಕದರ್ಶನ, ಎಮ್ಐಜಿ–4, ಕೆ.ಎಚ್.ಬಿ. ಮೂರನೇ ಹಂತ ಕುವೆಂಪುನಗರ, ಮೈಸೂರು.
7. ನಾಗೇಶ ಕೆ. ಬಿ. 1993 ಕುವೆಂಪು ಕಾವ್ಯಗಳಲ್ಲಿ ನಾಡು–ನುಡಿ–ಪ್ರೇಮ ಮತ್ತು ಸಂಸ್ಕೃತಿಯ ಒಂದು ಅಧ್ಯಯನ, ಕನ್ನಡ ವಿಭಾಗ, ಮದ್ರಾಸು ವಿ.ವಿ, ಚೆನ್ನೈ.